ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್.ಎ. ದೇಶಪಾಂಡೆ(ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 17.3.2003ರ ಲಿಖಿತ ಮೂಲಕ ಉತ್ತರಿಸುವ 115 ಪ್ರಶ್ನೆಗಳ ಪೈಕಿ 94 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು:- ಅನುಬಂಧ 1 ಮಂಡಿಸಲಾಯಿತು - ಅನುಬಂಧ 1

2) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ:- ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ "ಕರ್ನಾಟಕ ಪೌರಸಭೆಗಳ (ಮೂರನೇ ತಿದ್ದುಪಡಿ) ವಿಧೇಯಕ 2002ನ್ನು ಸಭೆಯ ಮುಂದಿಡುತ್ತೇವೆ.

ಅಧ್ಯಕ್ಷರು:- ಮಂಡಿಸಲಾಯಿತು

(ಗೊಂದಲ)

3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ಅ) ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಮಂಡಳಿ ಕುರಿತು

ಶ್ರೀ ಜಗದೀಶ್ ಶೆಟ್ಟರ್:- ಪ್ರತಿ ಸಲ ಈ ಬಗ್ಗೆ ಚರ್ಚೆಯಾಗುತ್ತದೆ, ಸರ್ಕಾರ ಸ್ಪಷ್ಟವಾದ ಭರವಸೆಯನ್ನು ಕೊಡುವುದಿಲ್ಲ.

ಅಧ್ಯಕ್ಷರು:- ಆ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇವಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮುಂದಕ್ಕೆ ಹಾಕಿದರೆ, ಅದು ಮುಂದಿನ ಅಧಿವೇಶನಕ್ಕೆ ಹೋಯಿತು, ಅವರು ಸ್ಪಷ್ಟವಾಗಿ ಉತ್ತರವನ್ನು ಕೊಡಲಿ, ಮಂತ್ರಿಗಳು ಹೇಳಲಿ. ನಬಾರ್ಡ್‌ನಿಂದ ಹಣ ಕೊಡುತ್ತೇವೆಂದು ಎಲ್ಲಿ ನಬಾರ್ಡ್ ಹಣ ಇದೆ? 50 ಲಕ್ಷ ರೂ. ಲಿಸ್ಟ್ ತೆಗೆದುಕೊಂಡು, ಅದು ಅಲ್ಲ, ಅದಕ್ಕೆ ಏನು ಉತ್ತರ ಕೊಡುತ್ತಾರೆ? ಕಳೆದ ಮೂರು ವರ್ಷಗಳಿಂದ ಯಾವುದೇ ಕ್ಷೇತ್ರಕ್ಕೆ ಒಂದು ಲಕ್ಷ ರೂ ಹಣ ಬಿಡುಗಡೆ ಮಾಡಿಲ್ಲ, ಅವರು ಅದರ ಬಗ್ಗೆ ಹೇಳಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಈ ಸದನದಿಂದ ತಪ್ಪು ತಿಳುವಳಿಕೆ ಜನರಿಗೆ ಆಗಬಾರದು, ಏಕೆಂದರೆ ನಿಮಗೆ ಬೇಕಾದಂಥ ಕೊರತೆಯ ಬಗ್ಗೆ ಇಲ್ಲಿ ತಾವು ನಿವೇದಿಸಿಕೊಳ್ಳಬಹುದು, ಆದರೆ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡಿ, ಇತ್ಯಾದಿಯಾಗಿ ಹೇಳುವುದಾದರೆ ಅಲ್ಲಿಯ ಜನರ್ಯಾರೂ ಕೇಳುವವರಿಲ್ಲವೆಂದು ತಾವು ಹೇಳುವುದೇ? ನಿಮಗೆ ಬೇಕಾಗಿದ್ದನ್ನು ಕೇಳಿಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದೇ ವಿಷಯದ ಬಗ್ಗೆ ಇಷ್ಟೊಂದು ಸಲ ಸದನದಲ್ಲಿ ಚರ್ಚೆಯಾಗಿದೆ, ಆಗುತ್ತದೆ. ಅದಕ್ಕೆ ಅಂತಿಮವಾಗಿ ಸರ್ಕಾರದಿಂದ ಸ್ಪಷ್ಟವಾದ ಭರವಸೆಯನ್ನು ಕೊಡುವುದಿಲ್ಲ, ಕೊಡುತ್ತಿಲ್ಲ. ಪ್ರತೀ ಸಲ ಇದೇ ಆಗಿದೆ. ಇದು ತಮಗೂ ಗೊತ್ತಿದೆ.

ಅಧ್ಯಕ್ಷರು:- ಇದಕ್ಕೆ ಉತ್ತರ ಸಿಗುವ ಸಲುವಾಗಿ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆಂದು ಹೇಳಿದೆನಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮುಂದಕ್ಕೆ ಹಾಕಿದರೆ ಆ ಪ್ರಶ್ನೆ ಮುಂದಿನ ಸೆಷನ್‌ಗೆ ಹೋಗುತ್ತದೆ. ಅಂದರೆ ಅಲ್ಲಿಗೆ ಅದು ಮುಗಿಯಿತು. ಆದ್ದರಿಂದ ಅವರು ಸ್ಪಷ್ಟವಾದ ಉತ್ತರವನ್ನು ಕೊಟ್ಟುಬಿಡಲಿ.

(ಗೊಂದಲ)

ಅಧ್ಯಕ್ಷರು:- ಎಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೋಗಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಬಾರ್ಡ್‌ನಿಂದ ಹಣ ಕೊಡುತ್ತೇವೆಂದು ಹೇಳಿದರು. ಹಾಗಾದರೆ ನಬಾರ್ಡ್‌ನಿಂದ ಎಲ್ಲಿ ಹಣ ಕೊಟ್ಟಿದ್ದಾರೆ? 20 ಲಕ್ಷ, 50 ಲಕ್ಷದ್ದು ಲಿಸ್ಟ್ ತೆಗೆದುಕೊಂಡರು. ಅದೂ ಇಲ್ಲ. ಅದಕ್ಕೆ ಏನು ಉತ್ತರ ಕೊಡುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ:- ಕ್ವಶ್ಚನ್ ಅವರ್‌ನಲ್ಲಿ ಯಾವುಯಾವುದನ್ನೋ ಕೇಳಿ ಎಲ್ಲೆಲ್ಲೋ ಹೋಗುತ್ತಿದ್ದಾರೆ. ಇದು ಸರಿಯಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕಳೆದ ಮೂರು ವರ್ಷಗಳಿಂದ ಯಾವುದೇ ಕ್ಷೇತ್ರದಲ್ಲಿ ಒಂದು ಲಕ್ಷ ರೂ. ಸಹ ಹಣ ಬಿಡುಗಡೆ ಮಾಡಿಲ್ಲ. ಅದರ ಬಗ್ಗೆ ಹೇಳಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಂತ್ರಿಗಳೇ ಈ ಅಭಿವೃದ್ಧಿ ಮಂಡಳಿಗಳನ್ನು ಮುಚ್ಚಬೇಕೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ದಯವಿಟ್ಟು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಈ ಸದನದಿಂದ ಜನರಿಗೆ ತಪ್ಪು ತಿಳುವಳಿಕೆ ಆಗಬಾರದು. ಏಕೆಂದರೆ ಕೊರತೆ ಬಗ್ಗೆ ತಾವು ಇಲ್ಲಿ ನಮೂದಿಸಬಹುದು. ಆದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ರದ್ದು ಮಾಡಿ, ಬೇರೆ ಮಂಡಳಿಗಳನ್ನು ರದ್ದು ಮಾಡಿ ಎಂದು ಹೇಳಿದರೆ, ಅಂದರೆ ಅಲ್ಲಿಯ ಜನ ಯಾರೂ ಕೇಳುವವರು ಇಲ್ಲ ಎಂದು ನೀವು ಇಲ್ಲಿ ಹೇಳುವುದೇ,... ಸ್ವಲ್ಪ ನಾನು ಹೇಳುವುದನ್ನು ಕೇಳಿ. ನಿಮಗೆ ಬೇಕಾಗಿದ್ದನ್ನು ಕೇಳಿ. ಆದರೆ ಆ ಮಂಡಳಿ ತೆಗೆಯಿರಿ ಇದು ತೆಗೆಯಿರಿ ಎಂದು ನೀವು ಯಾರು ಹೇಳುವುದಕ್ಕೆ?

ಅಧ್ಯಕ್ಷರು:- ಗೃಹ ಸಚಿವರು ಹೇಳಿದ್ದು ಕರೆಕ್ಟ್ ಇದೆ. ಏನು ಬೇಕೋ ಕೇಳಿ. ಹೀಗೆ ಏಕೆ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:- ನಿಮ್ಮ ಪ್ರಶ್ನೆಗೆ 31ನೇ ತಾರೀಕಿನೊಳಗೆ ಉತ್ತರ ಕೊಡಿಸುವುದಕ್ಕೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ತಮಗೆ ಕೇಳುವುದಕ್ಕೆ ಹಕ್ಕು ಇದೆ ಕೇಳಿ. ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು:- ಈ ತಿಂಗಳು 31ನೇ ತಾರೀಕು ಪುನಃ ಆ ಪ್ರಶ್ನೆಯನ್ನು ಕೇಳಿ. ಅದಕ್ಕೆ ಉತ್ತರ ಕೊಡಿಸಲಿಕ್ಕೆ ನಾನು ತಯಾರು ಇದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕ ಮಿತ್ರರು ಇದು ಗಂಭೀರ ವಿಷಯ ಎಂದು ತಿಳಿದುಕೊಂಡು ಇಲ್ಲಿಗೆ ಧರಣಿ ಮಾಡಲು ಬಂದಿದ್ದಾರೆ. ಅವರೆಲ್ಲ ಈ ಪ್ರೊಸೀಡಿಂಗ್ಸ್ ನಿಲ್ಲಬೇಕೆಂದು ಧರಣಿ ಕುಳಿತಿದ್ದಲ್ಲ. ದಯವಿಟ್ಟು ತಾವು ಸರ್ಕಾರದ ಕಡೆಯಿಂದ ಒಂದು ಸ್ಪಷ್ಟವಾದ ಉತ್ತರವನ್ನು ಕೊಡಿಸಿದರೆ ಅವರು ಧರಣಿ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ಅವರು ಸ್ಪೆಸಿಫಿಕ್ ಆದಂಥ ಉತ್ತರ ಕೊಟ್ಟುಬಿಡಲಿ.

(ಗೊಂದಲ)

ಅಧ್ಯಕ್ಷರು:- ಅವರು ಉತ್ತರ ಕೊಡುವುದಕ್ಕೆ ರೆಡಿಯಾಗಿ ನಿಂತಿದ್ದಾರೆ. ಅವರು ಹೇಳುತ್ತಿರುವ ಉತ್ತರವನ್ನೇ ನೀವು ಕೇಳುತ್ತಿಲ್ಲವಲ್ಲಾ.

(ಗೊಂದಲ)

(ಈ ಹಂತದಲ್ಲಿ ಧರಣಿ ನಿರತರಾಗಿದ್ದಂಥ ಸದಸ್ಯರುಗಳು ಧರಣಿ ಕೈಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸಾದರು).

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಈ ವಿಷಯ ಈ ಸದನದಲ್ಲಿ 2-3 ಸಲ ಗಂಭೀರವಾಗಿ ಪ್ರಸ್ತಾಪವಾಗಿದೆ. ಆದರೆ ಸರ್ಕಾರದ ಕಡೆಯಿಂದ ಅದಕ್ಕೆ ಬೇಕಾದಂಥ ಹಣ ಬಿಡುಗಡೆಯಾಗುತ್ತಿಲ್ಲ. ಈಗ ಈ ರೀತಿ ಮಾಡಿ ಪಬ್ಲಿಕ್ ಏಕೆ ರಾಂಗ್ ಸಿಗ್ನಲ್ ಕೊಡುತ್ತಿದ್ದೀರಿ ಎಂದು ಶ್ರೀ ಖರ್ಗೆಯವರು ಕೇಳಿದರು. ಇವತ್ತು ನಾನು ಹೇಳುತ್ತಿರುವುದು ಏನೆಂದರೆ, ಇವೆಲ್ಲಾ ಅಭಿವೃದ್ಧಿ ಮಂಡಳಿಗಳನ್ನು ಮುಚ್ಚಿ ಹಾಕಬೇಕೆಂದು ನಿಮ್ಮ ಮಂತ್ರಿಗಳಾಗಿರುವ ಶ್ರೀ ರಾಜೂಗೌಡರು ಅವರೇ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಬಗ್ಗೆ ಸರ್ಕಾರದ ಕಡೆಯಿಂದ ನೀವು ಏನು ಹೇಳುತ್ತೀರಿ? ಹೀಗಾಗಿ ಇದನ್ನು ಮುಂದುವರಿಸುತ್ತೀರೋ ಇಲ್ಲವೋ ಎನ್ನುವುದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ಎನ್ನುವುದು ಬೇಕು. ಮುಂದುವರಿಸುವುದಾದರೆ ಸರ್ಕಾರದ ಕಡೆಯಿಂದ ಸರಿಯಾಗಿ ಅನುದಾನ ಕೊಡುತ್ತೀರೋ ಇಲ್ಲವೋ ಎನ್ನುವ ಸ್ಪಷ್ಟನೆ ಮಾಡಬೇಕು. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ಈ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚಿನ ಅನುದಾನ ಸಿಗುವಂತೆ ಆಗಬೇಕು ಮತ್ತು ಅವಧಿಯೊಳಗಾಗಿ, ಇವತ್ತು ಏನು ನಬಾರ್ಡ್‌ನಿಂದ ಲಿಸ್ಟ್ ತೆಗೆದುಕೊಂಡಿದ್ದೀರಿ, ಮತ್ತು ಪ್ರತಿ ವರ್ಷ ಏನು ಕಾಮಗಾರಿಯದು ಲಿಸ್ಟ್ ತೆಗೆದುಕೊಳ್ಳುತ್ತೀರಿ, ಆ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವಂಥ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಕೇವಲ ನೀವು ಕಾಮಗಾರಿಗಳದ್ದು ಲಿಸ್ಟ್ ತೆಗೆದುಕೊಂಡು ಅದಕ್ಕೆ ಹಣ ಬಿಡುಗಡೆ ಮಾಡದಿದ್ದರೆ ಯಾವುದೂ ಪ್ರಯೋಜನವಾಗುವುದಿಲ್ಲ. ಅಲ್ಲಿ ಏನಾಗುತ್ತದೆ ಎಂದರೆ ನಾವು ಜನಗಳಿಗೆ ಉತ್ತರ ಕೊಡಬೇಕಾಗುತ್ತದೆ. ನೀವು ಇಷ್ಟೊಂದು ಲಿಸ್ಟ್ ತೆಗೆದುಕೊಂಡಿದ್ದೀರಿ, ಈ ಕಾಮಗಾರಿಗಳನ್ನು ಮಾಡಿಸುತ್ತಿದ್ದೇನೆಂದು ಹೇಳುತ್ತಿದ್ದೀರಿ, ಹಣ ಎಲ್ಲಿ ಬಿಡುಗಡೆ ಆಗಿದೆ? ಮೂರು ವರ್ಷದಿಂದ ಒಂದೂ ಕಾಮಗಾರಿ ಆಗಿಲ್ಲ, ನಬಾರ್ಡ್‌ನಿಂದ ಒಂದೂ ಕೆಲಸ ಆಗಿಲ್ಲ, ಹಾಗಾದರೆ ಅಭಿವೃದ್ಧಿ ಮಂಡಳಿ ಏಕೆ ಇರಬೇಕೆನ್ನುವಂಥದ್ದನ್ನು ಜನ ನಮಗೆ ಕೇಳುತ್ತಾರೆ. ಸ್ಪಿಲ್ ಓವರ್ ವರ್ಕ್ ಹಾಗೆಯೇ ಉಳಿದಿದೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಇವತ್ತು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಈ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನವನ್ನು ಕೊಡುತ್ತೇವೆ, ಎನ್ನುವಂಥದ್ದನ್ನು ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ವಿಷಯ ಸಮಿತಿಯಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿ ಈ ಕೆಲವು ಬೋರ್ಡ್‌ಗಳನ್ನು ಏನು ಇಟ್ಟುಕೊಂಡಿದ್ದಾರೆ. ಅಲ್ಲಿ ಕೆಲವು ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕೂ ದುಡ್ಡು ಇಲ್ಲ, ಕೆಲವು ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಅಲ್ಲಿ ಪೋಸ್ಟ್ ಮಾಡತಕ್ಕಂಥದ್ದಕ್ಕೆ ಮಾತ್ರ ಆ ಮಂಡಳಿಗಳನ್ನು ಇಟ್ಟುಕೊಂಡಿದ್ದಾರೆಯೇ ಹೊರತು ಅದರಿಂದ ಯಾವುದೇ ಒಂದು ಪುರುಷಾರ್ಥ ಸಾಧನೆಯಾಗುತ್ತಿಲ್ಲ. ಆದ್ದರಿಂದ ಎಲ್ಲಾ ಪಕ್ಷದ ಸದಸ್ಯರು ಸೇರಿ, ಈ ಎಲ್ಲಾ ಮಂಡಳಿಗಳನ್ನು ರದ್ದುಮಾಡಿ ಶಾಸಕರ ನಿಧಿಗೆ ಒಬ್ಬೊಬ್ಬರಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಆಧ್ಯತೆ ಮೇರೆಗೆ ಅವರವರ ಕ್ಷೇತ್ರದಲ್ಲಿ ಯಾವ ಕೆಲಸ ಬಹಳ ಪ್ರಮುಖವಾಗಿದೆ, ಯಾವ ಕೆಲಸ ಜರೂರು ಇದೆ ಅದನ್ನು ಅವರೇ ಆಯ್ಕೆ ಮಾಡಿಕೊಳ್ಳತಕ್ಕಂಥ ಅವಕಾಶ ಇರುತ್ತದೆ. ಒಂದೊಂದು ಕೋಟಿ ರೂಪಾಯಿಗಳನ್ನು ಒಬ್ಬೊಬ್ಬ ಶಾಸಕರಿಗೆ ಕೊಡಬೇಕು; ಈ ಮಂಡಳಿಗಳನ್ನು ರದ್ದು ಮಾಡಬಹುದೆಂದೂ ಸಹ ಶಿಫಾರಸ್ಸು ಮಾಡಿದ್ದೇವೆ. ವಿಷಯ ಸಮಿತಿಯಿಂದ ಏನು ಶಿಫಾರಸ್ಸು ಮಾಡಿದ್ದೇವೆ ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್.ಬಿ. ತಿಮ್ಮಾಪುರ(ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಅಂಕಿಅಂಶ ಸಚಿವರು):- ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರು ಬಹಳ ಸ್ಪಷ್ಟವಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಬಗ್ಗೆ ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಸಚಿವನಾಗಿ ನಾನು ಉತ್ತರ ಕೊಡಬೇಕಾಗುತ್ತದೆ. ಈ ಪ್ರಶ್ನಾವಳಿಯಲ್ಲಿ ಮಲೆನಾಡು ಅಭಿವೃದ್ಧಿ ಬಯಲು ಸೀಮೆ ಅಭಿವೃದ್ಧಿ ಬಗ್ಗೆ ಕೇಳುತ್ತಾ ಹೋದರೆ ಸರ್ಕಾರ ಉತ್ತರ ಕೊಡಲಿಕ್ಕೆ, ಆ ಮಂತ್ರಿಗಳು ಇದ್ದರೂ ಅದಕ್ಕೆ ಸರಿಯಾದ ಸಮರ್ಪಕವಾದ ಉತ್ತರ ಕೊಡಬೇಕಾದದ್ದು ಸಹಜವಾಗಿ ಇದೆ. ಇವರು ಒಂದೇ ಸಲಕ್ಕೆ ಹಣ ಇಲ್ಲ, ಕೆಲಸ ಆಗಿಲ್ಲ ಎನ್ನತಕ್ಕಂಥ ಎಲ್ಲಾ ಅಭಿವೃದ್ಧಿ ಮಂಡಳಿಗಳನ್ನು ತಂದು ಇಲ್ಲಿ ಕ್ವೊಶ್ಚನ್ ಕೇಳಿದರೆ ಸರ್ಕಾರದ ಬಗ್ಗೆ ಜನತೆಗೆ ತಪ್ಪು ಅಭಿಪ್ರಾಯ ಹೋಗತಕ್ಕಂಥದ್ದು ಇದೆ. ಆದ್ದರಿಂದ ನಾನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸೀಮಿತವಾಗಿ ಮಾತ್ರ ಹೇಳುತ್ತೇನೆ. 1992ರಲ್ಲಿ ಬಹುಶಃ ಮಾನ್ಯ ವೀರೇಂದ್ರಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಇದು ಪ್ರಾರಂಭವಾಯಿತು. 1991 ರಿಂದ 1994ರ ವರೆಗೆ 50 ಕೋಟಿ ರೂಪಾಯಿಗಳಿಂದ 60 ಕೋಟಿ ರೂಪಾಯಿಗಳವರೆಗೆ ಹಣವನ್ನು ಆ ಮಂಡಳಿಗೆ ಕೊಡುತ್ತಾ ಬಂದೆವು. ಆದರೆ ಜನತಾದಳ ಸರ್ಕಾರ ಬಂದ ನಂತರ ಅದಕ್ಕೆ ಎಷ್ಟು ಹಣ ಕಡಿಮೆ ಆಯಿತು ಎನ್ನತಕ್ಕಂಥ ಅಂಕಿಸಂಖ್ಯೆಯನ್ನು ನಾವು ಕೊಡಬೇಕಾಗುತ್ತದೆ. ಒಮ್ಮೆ 40 ಕೋಟಿ ರೂಪಾಯಿಗಳನ್ನು ಕೊಟ್ಟರು, 36 ಕೋಟಿ ರೂಪಾಯಿಗಳನ್ನು ಕೊಟ್ಟರು, 54 ಕೋಟಿ ರೂಪಾಯಿಗಳನ್ನು ಕೊಟ್ಟರು. ಅವರು ಬಹಳ ಆ ಅಭಿವೃದ್ಧಿ ಪರವಾಗಿ ಇರತಕ್ಕಂಥ ವಿಚಾರದಲ್ಲಿ ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಕೊಡುತ್ತಿದ್ದಂಥ ಹಣಕ್ಕಿಂತ ಕಡಿಮೆ ಕಡಿಮೆ ಮಾಡುತ್ತಾ ಬಂದರು.

(ಗೊಂದಲ)

ಶ್ರೀ ಆರ್.ಬಿ. ತಿಮ್ಮಾಪುರ:- ನೀವು ಏನು ಮಾಡಿದ್ದೀರಿ ಅದನ್ನು ನಾವು ಹೇಳಬೇಕಲ್ಲವೇ? ನಾವು ಏನು ಮಾಡಿದ್ದೇವೆ ಅದನ್ನು ಹೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ತಿಮ್ಮಾಪುರ್‌ರವರೇ, ಜನತಾದಳ ಸರ್ಕಾರ ಎಂದು ಹೇಳಿ.

(ಗೊಂದಲ)

ಶ್ರೀ ಆರ್.ಬಿ. ತಿಮ್ಮಾಪುರ:- ಜನತಾದಳ ಸರ್ಕಾರ ಇದ್ದಾಗ ಏನು ಆಯಿತು ಎಂಬುದನ್ನೂ ಸಹ ನಾನು ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ:- ಜನರಲ್ ಆಗಿ ಹೇಳಲಿ ನನ್ನದು ಆಬ್ಜೆಕ್ಷನ್ ಏನೂ ಇಲ್ಲ. ನನ್ನೆಸರು ಹೇಳಿದ್ರಲ್ಲಾ , ಅದಕ್ಕೆ ಈ ಸರ್ಕಾರದ ಬಗ್ಗೆಯೂ ಹೇಳಿ ಎಂದು ಹೇಳಿದೆ.

1.10 ಪಿಎಂ

ಅವರು ಹೆಸರು ತೆಗೆದುಕೊಂಡು ಹೇಳಿದ್ದಕ್ಕೆ ನಾನು ಹೇಳಿದ್ದು.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಆರ್.ಬಿ. ತಿಮ್ಮಾಪುರ್:- ಮಾನ್ಯ ಅಧ್ಯಕ್ಷರೇ, ನಾನು ಅದನ್ನು ವಾಪಸ್ ತೆಗೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಸ್ವಲ್ಪ ನಿಮ್ಮ ಮಾತನ್ನು ಬೆರೆಸುವುದಕ್ಕೋಸ್ಕರ ಅವರು ಆ ರೀತಿ ಹೇಳಿದರು.

ಶ್ರೀ ಡಿ.ವಿ. ಸದಾನಂದಗೌಡ:- ಇಲ್ಲಿಯವರೆಗೆ ಬಚ್ಚೇಗೌಡರ ಸರ್ಕಾರ ಬಂದಿಲ್ಲ. ಇದು ಸರ್ಕಾರವೇ? ಸುಮ್ಮನೆ ಏಕೆ ಆ ರೀತಿ ಹೇಳಬೇಕು?

(ಗೊಂದಲ)

ಶ್ರೀ ಆರ್.ಬಿ.ತಿಮ್ಮಾಪುರ್:- ಮಾನ್ಯ ಅಧ್ಯಕ್ಷರೇ, ಅದನ್ನು ಹಿಂತೆಗೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಸರ್ಕಾರವಲ್ಲ. ಸರ್ಕಾರವಲ್ಲ. ಮತ್ತೆ ನಾವು 1999ರಿಂದ ಇಲ್ಲಿಯವರೆಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆಂಬುದಕ್ಕೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ. ಈಗ 56 ಕೋಟಿ ರೂಪಾಯಿಗಳು.....

(ಗೊಂದಲ)

ಅಧ್ಯಕ್ಷರು:- ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶವನ್ನು ಕೊಡಿ. ಪೂರಾ ಉತ್ತರ ಹೇಳುವವರೆಗಾದರೂ ತಡೆಯಿರಿ. ಆಮೇಲೆ ಕೇಳ್ರಿ.

(ಗೊಂದಲ)

ಶ್ರೀ ಆರ್.ಬಿ. ತಿಮ್ಮಾಪುರ್:- 2000-01ರಲ್ಲಿ 58 ಕೋಟಿ 89 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. 2001-02ರಲ್ಲಿ 57 ಕೋಟಿ 50 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. 56 ಕೋಟಿ ರೂ. ಹೋದವರ್ಷದ್ದು. ಪಾರದರ್ಶಕತೆಯನ್ನು ತಂದಿದ್ದರಿಂದ ಇವತ್ತು ಖರ್ಚು ಮಾಡಲಾರದೇ ಉಳಿದ ಹಣ 56 ಕೋಟಿ ರೂ.ಗಳು ಈ ಸಲ 31 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಈ ಸಲದ ಅನುದಾನದಲ್ಲಿ ನಾವು ಸೇರಿಸಿಕೊಂಡಿದ್ದೇವೆ. ಆದರೆ ಅದರಲ್ಲಿ 15 ಕೋಟಿ ರೂ.ಗಳನ್ನು ನಾವು ಈ ಸಲ ಕಡಿತ ಮಾಡಿದ್ದೇವೆ. 10 ಕೋಟಿ ರೂಪಾಯಿಗಳನ್ನು ಮಾತ್ರ ರಿಲೀಸ್ ಮಾಡಿದ್ದೇವೆ. ಇನ್ನು ಆರು ಕೋಟಿ ರೂಪಾಯಿ ಹಣಕಾಸಿನ ಇಲಾಖೆಯಲ್ಲಿದೆ. ಅದನ್ನು ಕೂಡ ನಾವು ರಿಲೀಸ್ ಮಾಡುವ ಹಂತದಲ್ಲಿದ್ದೇವೆ. ಈ ರೀತಿ ಒಟ್ಟು ಹೊಸದಾಗಿ ಬಂದ ನಮ್ಮ

ಸರ್ಕಾರ ತೆಗೆದುಕೊಂಡಂಥ ಕಾರ್ಯಕ್ರಮಗಳು. ಇದರಲ್ಲಿ ಒಟ್ಟು ಈ ಸಲ ನಾವು ಎಸ್ಟಿಮೇಟ್‌ನ್ನು ಮಾಡಿರತಕ್ಕಂಥದ್ದು 88 ಕೋಟಿ 67 ಲಕ್ಷ ರೂಪಾಯಿಗಳು. ನಾವು ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ನಾವೇನು 15 ಕೋಟಿ ರೂಪಾಯಿಗಳನ್ನು ಕಡಿತ ಮಾಡಿದ್ದೇವೆ, ಅಷ್ಟಕ್ಕೆ ಸೀಮಿತವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಹೈದರಾಬಾದ್-ಕರ್ನಾಟಕ ಮಂಡಳಿಗೆ ನಾವು ಹಣವನ್ನು ಒದಗಿಸಿದ್ದೇವೆ. ಇನ್ನು ಬಯಲು ಸೀಮೆ ಮತ್ತು ಮಲೆನಾಡು ಅಭಿವೃದ್ಧಿ ಬಗ್ಗೆ ಹೇಳುವುದಕ್ಕೆ ಸಚಿವರುಗಳು ಇಲ್ಲ. ಅದಕ್ಕೆ ತತ್‌ಕ್ಷಣಕ್ಕೆ ಹಣ ಕೊಡತಕ್ಕದ್ದು, ಬಿಡತಕ್ಕದ್ದು ಅವರು ಬಂದಾಗ ಹೇಳುತ್ತಾರೆ. ಪ್ರತ್ಯೇಕವಾದ ಪ್ರಶ್ನೆಗಳನ್ನು ಹಾಕಿದಾಗ ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರು ಇದ್ದೇವೆ.

ಅಧ್ಯಕ್ಷರು:- ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಬಗ್ಗೆ ಮಾತ್ರ ಕೇಳಿ. ಬಯಲುಸೀಮೆ ಅಥವಾ ಮಲೆನಾಡು ಅಭಿವೃದ್ಧಿ ಮಂಡಳಿಗಳ ಬಗ್ಗೆ ಹೇಳುವುದಕ್ಕೆ ಈಗ ಸಚಿವರು ಇಲ್ಲ. ಗಡಿನಾಡು ಪ್ರದೇಶದ್ದು ಈಗ ಬರುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಗುಂಡು ಸೂಜಿ ಮಂಜೂರು ಮಾಡುವುದಕ್ಕೂ ಆಗುವುದಿಲ್ಲವೆಂದು ತಾವೇ ಹೇಳಿದ್ದೀರಿ.

(ಗೊಂದಲ)

ಮಾನ್ಯ ಸದಸ್ಯರು:- ತಾವು ಇರುವುದು ಇಡೀ ಸದನದ ಪರವಾಗಿ ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು:- ನಾನು ಎಲ್ಲರ ಪರವಾಗಿಯೂ ಇದ್ದೇನೆ.

(ಗೊಂದಲ)

ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ):- ಮಾನ್ಯ ಅಧ್ಯಕ್ಷರೇ, ಹೈದರಾಬಾದ್-ಕರ್ನಾಟಕದ ಬಗ್ಗೆ ಕೇಳುತ್ತಿದ್ದೇನೆ. ಆದರೆ ಹಣ ಬಿಡುಗಡೆ ಬಗ್ಗೆ ಮಾನ್ಯ ಸಚಿವರೇನು ಹೇಳುತ್ತಿದ್ದಾರೆ, ಆಗ 40 ಕೋಟಿ ರೂಪಾಯಿಗಳು, ಈಗ 80 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಕಾಗುವುದಿಲ್ಲ. ಇದು ವೈಯುಕ್ತಿಕ ಅಭಿಪ್ರಾಯ. ಇವತ್ತು 80 ಕೋಟಿ ರೂಪಾಯಿ ಕೊಟ್ಟರೂ ಅಲ್ಲಿ ಕಾಸ್ಟ್ ಹೆಚ್ಚಾಗುತ್ತದೆ. ಅದಕ್ಕಾಗಿ ನಾನು ಸಚಿವರಲ್ಲಿ ಕೇಳುತ್ತೇನೆ, ಏನು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ಎಷ್ಟು ಕೆಲಸ ಆಗಬೇಕು, ಅಷ್ಟು ಆಗುತ್ತಿಲ್ಲ. ಏನೆಂದರೆ ಪ್ರತಿ ಶಾಸಕರಿಗೆ 50 ಲಕ್ಷ ರೂ.ಗಳನ್ನು ಕೊಡಿ. ಹೆಚ್‌ಕೆಡಿಬಿ ಮಾಡಿದಾಗ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಹೇಳಿದ್ದರು. ಇವತ್ತು ಅದು ಬಂದಿಲ್ಲ. ಪ್ರತಿ ಶಾಸಕರಿಗೆ 50 ಲಕ್ಷ ರೂ.ಗಳನ್ನು ಕೊಡಿ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಹೆಚ್‌ಕೆಡಿಬಿ ಫಂಡ್‌ಗಾಗಿ ನಬಾರ್ಡ್‌ಗೆ 50 ಲಕ್ಷ ಪ್ರಸ್ತಾವನೆ ಸಲ್ಲಿಸುವುದಕ್ಕೆ ಹೇಳುತ್ತಿದ್ದರು. ಇಲ್ಲಿಯವರೆಗೆ ಯಾವುದೇ ಸೂಚನೆ ಬಂದಿಲ್ಲ. ಅದಕ್ಕಾಗಿ ಪ್ರತಿ ಕ್ಷೇತ್ರಕ್ಕೆ ನಮಗೆ ನಬಾರ್ಡ್‌ನಿಂದ ಹೆಚ್‌ಕೆಡಿಬಿ.ಗೆ 50 ಲಕ್ಷ ರೂಪಾಯಿಗಳನ್ನು ಕೊಡುತ್ತಾರೋ ಇಲ್ಲವೋ ಎನ್ನುವುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ):- ಮಾನ್ಯ ಅಧ್ಯಕ್ಷರೇ, ನಮಗೆ 31 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದರು; ಆದರೆ ಅದರಲ್ಲಿ ರಿಲೀಸ್ ಮಾಡಿರುವುದು 10 ಕೋಟಿ ರೂ.ಗಳು ಮಾತ್ರ. ಈಗ ಮತ್ತೆ 15 ಕೋಟಿ ರೂಪಾಯಿಗಳನ್ನು ರೆಡ್ಯೂಸ್ ಮಾಡಿದ್ದೇವೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ರೀಜನಲ್ ಇಂಬ್ಯಾಲೆನ್ಸ್‌ನ್ನು ಸರಿ ಮಾಡುತ್ತೇವೆಂದು ಹೇಳಿ ನಂಜುಂಡಪ್ಪ ವರದಿಯನ್ನು ಕೂಡ ತಾವು ತರಿಸಿಕೊಂಡಿದ್ದೀರಿ.

ಅಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಬೇಕೆಂದು ಹೇಳಿ ಆ ವರದಿಯಲ್ಲಿದೆ. ಅದೇ ರೀತಿ ಬೇರೆ ಬೇರೆ ಆಯೋಗಗಳನ್ನು ಕೂಡ ನೇಮಕ ಮಾಡಿದ್ದೀರಿ. ಕೆ.ಸಿ. ರೆಡ್ಡಿ ಆಯೋಗ ನೇಮಕ ಮಾಡಿದ್ದೀರಿ. ಏನು ಇವತ್ತು ಅದು ಇಂಪ್ಲಿಮೆಂಟ್ ಆಗುತ್ತದೆ ಎನ್ನುವುದು ಬಹಳ ಮುಖ್ಯ ಇದೆ. ಇರುವ ಹಣಕಾಸಿನಲ್ಲಿ 15 ಕೋಟಿ ರೂಪಾಯಿಗಳನ್ನು ಕಡಿತ ಮಾಡಿದರೆ ಆ ಭಾಗ ಹೇಗೆ ಅಭಿವೃದ್ಧಿ ಹೊಂದಲಿಕ್ಕೆ ಸಾಧ್ಯವಾಗುತ್ತದೆ? ಮತ್ತೆ ಸಬ್ಜೆಕ್ಟ್ ಕಮಿಟಿಯಲ್ಲಿ ಕೂಡ ಚರ್ಚೆ ಮಾಡಿದ್ದೇವೆಂದು ನಮ್ಮ ಮಾನ್ಯ ಸೋಮಶೇಖರ್‌ರವರು ಹೇಳಿದರು. ಅದು ಸಬ್ಜೆಕ್ಟ್ ಕಮಿಟಿ ಉತ್ತರ ಸಮಂಜಸ ಅಲ್ಲ. ನಾವು ಬಹಳ ದಿವಸದಿಂದ ತುಳಿತಕ್ಕೆ ಒಳಗಾಗಿದ್ದೇವೆ. ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಕೂಡ 371ನೇ ಆರ್ಟಿಕಲ್ ನಮಗೆ ಅನ್ವಯವಾಗಬೇಕೆಂದು ಹೇಳಿ ಹೋರಾಟವನ್ನು ಮಾಡುತ್ತಿದ್ದೇವೆ. ಇಂಥ ಒಂದು ಪರಿಸ್ಥಿತಿಯಲ್ಲಿ ಕೂಡ ಇವತ್ತು ಹಣ ಕಡಿಮೆ ಮಾಡಿದರೆ ಆ ಭಾಗ ಹೇಗೆ ಅಭಿವೃದ್ಧಿಯಾಗುವುದಕ್ಕೆ ಸಾಧ್ಯ ಇದೆ. ಮಾನ್ಯ ಅಧ್ಯಕ್ಷರೇ, ತಾವು ನಮ್ಮನ್ನೆರವಿಗೆ ಬರಬೇಕಾಗುತ್ತದೆ. ಇವತ್ತು ಇರುವ ಹಣದಲ್ಲಿ 15 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದರೆ ಹೇಗೆ?

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಹೈದರಾಬಾದ್-ಕರ್ನಾಟಕ ಹಿಂದುಳಿದಿರುವ ವಿಚಾರ ಸಂಪೂರ್ಣವಾಗಿ ನನ್ನ ಗಮನದಲ್ಲಿದೆ. ನಾನು ಅದನ್ನು ರದ್ದು ಮಾಡಬೇಕೆಂದು ಹೇಳಿಲ್ಲ. ನಾನು ವಿಶೇಷವಾಗಿ ಹೇಳುತ್ತೇನೆ, ಹೆಚ್‌ಕೆಡಿಬಿ.ಯನ್ನು ಇವತ್ತು ಪ್ರತ್ಯೇಕವಾಗಿ ಉಳಿಸಿಕೊಳ್ಳಬೇಕು. ಅದಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟು, ಬೇರೆ ಮಂಡಳಿಗಳೇನು ಇವೆ. ಅವುಗಳನ್ನೆಲ್ಲಾ ರದ್ದುಮಾಡಿ. ಹಣ ಇಲ್ಲದೇ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರೆ ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ರದ್ದು ಮಾಡುವ ಅವಶ್ಯಕತೆ ಇಲ್ಲ. ಅದಕ್ಕೆ ಬೇಕಾದ ಫಂಡ್ಸ್‌ನ್ನು ಕೊಡಬೇಕಾದ ಅವಶ್ಯಕತೆ ಇದೆ. ಅದಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಆದ್ದರಿಂದ ಮಾನ್ಯ ಸಚಿವರಲ್ಲಿ ನಾವು ಕೇಳುವುದು ಇಷ್ಟೆ. ಈಗ ಮಾರ್ಚ್ ಬಂದಿದೆ. ಈಗ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಬರೀ ಹತ್ತು ಕೋಟಿ ರೂಪಾಯಿಗಳಿಂದ ಏನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ಇದೆ? ನಾವು ಎಲ್ಲಾ ಕ್ಷೇತ್ರದ ಶಾಸಕರೂ ಕೂಡ ಪಟ್ಟಿಯನ್ನು ಕೊಟ್ಟಿದ್ದೇವೆ. ಯೋಜನಾ ಮಂತ್ರಿಗಳು ತಾವು ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. 31 ಕೋಟಿ ರೂಪಾಯಿಗಳನ್ನು ಯಾವಾಗ ತಾವು ಬಿಡುಗಡೆ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ):- ಮಾನ್ಯ ಅಧ್ಯಕ್ಷರೇ, ನಾನು ಅಸೆಂಬ್ಲಿಗೆ ಮೊದಲ ಬಾರಿಗೆ ಬಂದಿದ್ದೇನೆ. ಹೈದರಾಬಾದ್-ಕರ್ನಾಟಕ ಮಂಡಳಿ ಬಗ್ಗೆ ಬೇರೆಯವರು ಪ್ರಶ್ನೆ ಕೇಳಿ ಅದನ್ನು ರದ್ದು ಮಾಡಿ ಎಂದು ಹೇಳುತ್ತಿದ್ದಾರಲ್ಲ, ಇದನ್ನು ಕೇಳಿ ನಮಗೆ ಬಹಳ ವ್ಯಥೆಯಾಗಿದೆ.

ಅಧ್ಯಕ್ಷರು:- ರದ್ದು ಮಾಡಿ ಎಂದು ಯಾರೂ ಹೇಳಲಿಲ್ಲ.

ಶ್ರೀ ಎಂ.ಜಿ. ಮುಳೆ:- ರದ್ದು ಮಾಡಿ ಎಂದು ಹೇಳಿದರೆ ಯಾರೂ ಉಳಿಯುವುದಿಲ್ಲ. ಯಾವ ಸರ್ಕಾರವೂ ಉಳಿಯುವುದಿಲ್ಲ.

ಅಧ್ಯಕ್ಷರು:- ನಮಗೂ ಕೊಡಿ ಎಂದು ಹೇಳಿದ್ದಾರೆ ಅಷ್ಟೇ ಹೊರತು ರದ್ದುಮಾಡಿ ಎಂದು ಹೇಳಿಲ್ಲ.

ಶ್ರೀ ಎಂ.ಜಿ. ಮುಳೆ:- ಆ ಭಾಗ ಬಹಳ ಹಿಂದುಳಿದಿದೆ. ರೀಜನಲ್ ಇಂಬ್ಯಾಲೆನ್ಸ್ ಇದೆ. ಆ ರೀಜನಲ್ ಇಂಬ್ಯಾಲೆನ್ಸ್ ಸರಿಮಾಡಬೇಕೆಂದು ಒಂದು ಚಿಂತನೆಯನ್ನು ಮಾಡಿ, ಅದು ಹೈದರಾಬಾದ್-ಕರ್ನಾಟಕ ಎಂದು ಫಾರ್ಮ್ ಆಗಿದೆ. ಇವತ್ತೇನು ಎಸ್.ಎಂ.ಕೃಷ್ಣ ಅವರ ಸರ್ಕಾರ ಬಂದಮೇಲೆ ಸ್ವಲ್ಪ ಆ ಕಡೆ ಈ ಕಡೆ ಕೆಲಸ ಆಗುತ್ತಿರುವುದು ಕಾಣುತ್ತಿದೆ. ಈಗ ಕೆಲಸ ನಡೆಯುತ್ತಿರುವಾಗ ಅದನ್ನು ರದ್ದುಮಾಡಬೇಕೆಂದರೆ ಅದು ಬಹಳ ತಪ್ಪು. ಆ ಭಾಗಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ. ಅದನ್ನು ರದ್ದುಮಾಡುವ ಪ್ರಶ್ನೆಯೇ ಇಲ್ಲ. ಅದನ್ನು ರದ್ದುಮಾಡಿದರೆ ಆಂಧೋಲನವಾಗಬಹುದು. ನಾವು ಹೈದರಾಬಾದ್-ಕರ್ನಾಟಕದ ಜನ ಸುಮ್ಮನೆ ಕೂರುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ಮಾಡುವುದಿಲ್ಲ ಸ್ವಾಮಿ, ಏಕೆ ಅದರ ಬಗ್ಗೆ ಹೇಳುತ್ತೀರಿ? ತಾವು ಕುಳಿತುಕೊಳ್ಳಿ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ- ಆಂಧೋಲನ ಎನ್ನುವ ಮಾತನ್ನು ದಯವಿಟ್ಟು ಹೇಳಬೇಡಿ.

ಅಧ್ಯಕ್ಷರು:- ಯಾರು ಹೇಳಿದ್ದಾರೆ ಎಂದು ಹೇಳುತ್ತಿದ್ದೀರಿ. ರದ್ದುಮಾಡಿ ಎಂದು ಯಾರೂ ಹೇಳಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಸಚಿವರು):- ಆ ಬಾಗಕ್ಕೆ ನಾವು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ಆ ಭಾಗದ ಶಾಸಕರು ಸರ್ಕಾರಕ್ಕೆ ಕೃತಜ್ಞರಾಗಿರಬೇಕು. ವಿಶೇಷವಾಗಿ ನಮ್ಮ ಗೃಹಮಂತ್ರಿಗಳು, ಹಿರಿಯ ಸಚಿವರಾದ ಧರ್ಮಸಿಂಗ್‌ರವರು ಇವರೆಲ್ಲಾ ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು ಒಲಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಆದ್ದರಿಂದ ಈ ರೀತಿ ಹೇಳಿದರೆ ಹೇಗೆ ಆಗುತ್ತದೆ?

ಅಧ್ಯಕ್ಷರು:- ರದ್ದುಮಾಡಿ ಎಂದು ಯಾರೂ ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು:- ನೋಡಿ, ಅವರು ಹೇಳುವುದು ಬರೆದುಕೊಳ್ಳಬೇಡಿ..

ಶ್ರೀ ಡಿ.ಕೆ. ಶಿವಕುಮಾರ್(ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಮ್ಮ ಪ್ಲಾನಿಂಗ್ ಮಿನಿಸ್ಟರ್ ಇದಕ್ಕೆ ಉತ್ತರಿಸುತ್ತಾರೆ, ನಾನು ನಮ್ಮ ಮಾನ್ಯ ಕೃಷ್ಣಮೂರ್ತಿಯವರು ಹಾಗೂ ಕೊಪ್ಪಳ ಶಾಸಕರು ಪ್ರತಿಯೊಂದು ಹಂತದಲ್ಲಿ ನಂಜುಡಪ್ಪನವರ ವರದಿ ಅನುಷ್ಠಾನದ ಬಗ್ಗೆ ಕೇಳುತ್ತಾರೆ. ಇದನ್ನು ನಾನು ಟೀಕೆ ಮಾಡುವುದಿಲ್ಲ. ಹಿಂದೆ ಯಾವುದೇ ಸರ್ಕಾರ ಈ ಕೆಲಸ ಮಾಡಿತ್ತೇ? ಈ ಸರ್ಕಾರ ಬಂದ ಮೇಲೆ ನಂಜುಡಪ್ಪನವರನ್ನು ಛೇರ್ಮನ್ ಮಾಡಿ ರಾಜ್ಯದಲ್ಲಿರತಕ್ಕಂಥ ಉತ್ತರ ಭಾಗಕ್ಕೂ ದಕ್ಷಿಣ ಭಾಗಕ್ಕೂ ಏನು ಆಗಿದೆ ಇದನ್ನೆಲ್ಲಾ ಕಂಡುಹಿಡಿಯಲಿಕ್ಕೆ ಈ ಸಮಿತಿಯನ್ನು ರಚಿಸಿ ನಿರ್ದಿಷ್ಟ ಟೈಮ್‌ನಲ್ಲಿ ರಿಪೋರ್ಟ್ ತೆಗೆದುಕೊಂಡು ಪ್ರತಿಯೊಂದು ಹಂತದಲ್ಲಿ ಇದನ್ನು ಮಾಡುವುದಕ್ಕೆ ಸರ್ಕಾರ ಯೋಜನೆಗಳನ್ನು ಹಾಕಿಕೊಂಡು ಬಂದಿದೆ. ನಂಜುಡಪ್ಪನವರ ಸಮಿತಿಯನ್ನು ಮಾಡಿಸಿದವರು ಯಾರು?.. ಅದಕ್ಕೆ ನೀವು ನಮಗೆ ಕಂಗ್ರಾಟ್ಸ್ ಹೇಳಬೇಕು... ಮಾಡುತ್ತೇವೆ, ಅದಕ್ಕಾಗಿಯೇ ನಾವು ಇದನ್ನು ರಚಿಸಿರುವುದು.

(ಗೊಂದಲ)

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಸಮಿತಿ ರಚನೆ ಮಾಡಿದ್ದೀರಿ ನಿಜ, ಆದರೆ ಸಮಿತಿ ಕೊಟ್ಟ ವರದಿಯನ್ನು ಅನುಷ್ಠಾನ ಮಾಡಿದ್ದೀರಾ?

(ಗೊಂದಲ)

ಅಧ್ಯಕ್ಷರು:- ನೋಡಿ 5-6 ಜನ ಒಟ್ಟಿಗೆ ಮಾತನಾಡುತ್ತಾರೆ. ಆದುದರಿಂದ ಅದನ್ನು ಬರೆದುಕೊಳ್ಳಬೇಡಿ. ಆಯಿತು ಇದು ಕ್ಲೋಸ್ ಆಯಿತು ಬಿಡಿ ಉತ್ತರ ಹೇಳಿ. You please answer.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಮಾನ್ಯ ಶಿವಕುಮಾರ್‌ರವರು ನನ್ನ ಹೆಸರನ್ನು ಪ್ರಸ್ತಾಪಿಸಿರುವುದರಿಂದ ನಾನು ಮಾತನಾಡಬೇಕಾಗಿದೆ. ಆದುದರಿಂದ ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

(ಗೊಂದಲ)

Mr. Speaker:- I will close this matter.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್:- ಇದಕ್ಕೆ ಕಾರಣ ಏನು ಎಂಬುದರ ಬಗ್ಗೆ ಹಾಗೂ ಇದರ ಪರಿಶೀಲನೆಗಾಗಿಯೇ ಸನ್ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಕಮಿಟಿ ರಚಿಸಿ, ಹೈದರಾಬಾದ್-ಕರ್ನಾಟಕ ಪ್ರದೇಸವನ್ನು ಇತರ ಪ್ರದೇಶಗಳಂತೆಯೇ ಕಾಣಲು, ಅವರು ಕೊಟ್ಟಂಥ ವರದಿಯಾಧಾರದ ಮೇಲೆಯೇ ಈ ಮಂಡಳಿ ರಚಿತಗೊಂಡಿದೆ. ಅದಕ್ಕೆ ಸಂಪೂರ್ಣವಾಗಿ ಹಣ ಕೊಡತಕ್ಕಂಥ ಸಂದರ್ಭದಲ್ಲಿ ತಾರತಮ್ಯ ಮಾಡಬಾರದು ಎಂದು ಹಾಗೂ ಹೆಚ್ಚಿನ ಒತ್ತಾಸೆಯನ್ನು ಕೊಡಬೇಕೆಂದು ಮತ್ತು ಇದು ಆ ಭಾಗದ ಶಾಸಕರ ಕರ್ತವ್ಯ ಇರುವುದರಿಂದ ನಾವು ಇಲ್ಲಿ ಅದರ ಬಗ್ಗೆ ಮಾತನಾಡುತ್ತಿದ್ದೇವೆ.

ಅಧ್ಯಕ್ಷರು:- ಎಲ್ಲರೂ ಹೇಳಿದ್ದಾರೆ. ಯಾರೂ ಮಂಡಳಿಯನ್ನು ರದ್ದು ಮಾಡಿ ಎಂದು ಹೇಳಿಲ್ಲ. I will close this matter.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ನಾವು ಡಾ|| ನಂಜುಂಡಪ್ಪನವರ ವರದಿಯನ್ನು ಜಾರಿಗೆ ತಂದಿರುವುದನ್ನು ಯಾವಾಗ ಸ್ವಾಗತಿಸುತ್ತೇವೆ ಎಂದರೆ, ಅದನ್ನು ಅನುಷ್ಠಾನಗೊಳಿಸಿದಾಗ ಮಾತ್ರ ನಾವು ಅದನ್ನು ಸ್ವಾಗತಿಸುತ್ತೇವೆ. ಜನಗಳೇ ಅದನ್ನು ಸ್ವಾಗತಿಸುತ್ತಾರೆ. ನಾವು ವಿರೋಧ ಪಕ್ಷದವರು ಅದನ್ನು ವಿರೋಧಿಸಿದರೂ ಜನಗಳೇ ಅದನ್ನು ಸ್ವಾಗತಿಸುತ್ತಾರೆ.

ಅಧ್ಯಕ್ಷರು:- ಆಯಿತು, ಹೈದರಾಬಾದ್-ಕರ್ನಾಟಕ ಅಷ್ಟಕ್ಕೆ ಮಾತ್ರ ತಾವು ಉತ್ತರ ಹೇಳಿ. Please sit down.

ಶ್ರೀ ಆರ್.ಬಿ. ತಿಮ್ಮಾಪೂರ್:- ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಯಾವುದೇ ರೀತಿಯ ಹಣದ ತೊಂದರೆ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕಳೆದ ಸಲ ನಮ್ಮದು 56 ಕೋಟಿ ರೂಪಾಯಿ ಹಣ ಉಳಿದಿದೆ. ಈ ವರ್ಷ 10 ಕೋಟಿ ರೂಪಾಯಿ ಉಳಿದಿದೆ. ನಾವು ಇನ್ನು 6 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರೆ, ಮಂಜೂರಾತಿಯಾಗದಿದ್ದಲ್ಲಿ 3244 ಏನು ಕ್ರಿಯಾ ಯೋಜನೆಗೆ ಅನುಮತಿ ನೀಡಿದ್ದೇವೆ ಅದನ್ನು ಒಟ್ಟಾರೆಯಾಗಿ ಪೂರ್ಣಗೊಳಿಸಲಿಕ್ಕೆ ಸಾಧ್ಯವಿದೆ. ಇನ್ನು ಅಸಮತೋಲನ ಪರಿಹಾರಕ್ಕಾಗಿ ಮೊನ್ನೆ ತಾನೇ 11-2-2003ರಂದು ನಡೆದ ನಮ್ಮ ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಉಪ ಸಮಿತಿಯನ್ನು ರಚಿಸಿ, ಡಾ|| ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರಲಿಕ್ಕೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳಿಗೆ, ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಅದನ್ನು ಅನುಷ್ಠಾನ ತರಲಿಕ್ಕೆ ನಾವು ತಯಾರಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಇದು ಇಲ್ಲಿಗೆ ಕ್ಲೋಸ್ ಆಯಿತು. ಈಗ ಕಾಲಿಂಗ್ ಅಟೆನ್‌ಷನ್ ಮಾನ್ಯ ದಿನೇಶ್ ಗುಂಡುರಾವ್‌ರವರೇ ತಾವು ರೈಸ್ ಮಾಡಿ. ಇದನ್ನು ಜೀರೋ ಅವರ್‌ನಲ್ಲಿ ಅಲೋ ಮಾಡಿದ್ದಕ್ಕೆ ಒಂದು ಗಂಟೆ ಟೈಮ್ ತೆಗೆದುಕೊಂಡಿದೆ, ಡೋಂಟ್ ಟೇಕ್ ಡೌನ್ ಅವರು ಹೇಳುವುದನ್ನು ಯಾವುದು ಬರೆದುಕೊಳ್ಳಬೇಡಿ. ಮಾನ್ಯ ದೇಶಪಾಂಡೇಯವರೇ, ತಾವು ಹೇಳಿ.

(ಗೊಂದಲ)

4. ಗಮನ ಸೆಳೆಯುವ ಸೂಚನೆ

ವಿಷಯ:- ರಾಜ್ಯ ಸರ್ಕಾರದ ಸ್ವಾಮ್ಯದ ಮೈಸೂರ್ ಲ್ಯಾಂಪ್ಸ್ ಕಾರ್ಖಾನೆಯ ಬಂಡವಾಳವನ್ನು ಹಿಂದಕ್ಕೆ ಪಡೆಯಲು ಸರ್ಕಾರ ತೀರ್ಮಾನಿಸಿರುವುದರ ಬಗ್ಗೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ):- ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಸ್ವಾಮ್ಯದ ಮೈಸೂರ್ ಲ್ಯಾಂಪ್ಸ್ ಕಾರ್ಖಾನೆಯ ಬಂಡವಾಳವನ್ನು ಹಿಂದಕ್ಕೆ ಪಡೆಯಲು ಸರ್ಕಾರ ತೀರ್ಮಾನಿಸಿರುವ ಬಗ್ಗೆ ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೆ, 1936ರಲ್ಲಿ ಸ್ಥಾಪಿತವಾದ ಮೈಸೂರು ದೀಪದ ಕಾರ್ಖಾನೆ, 1983ರ ಜುಲೈನಿಂದ ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮವಾಗಿತ್ತು. 1993-94ರಿಂದೀಚೆಗೆ ಕಂಪನಿಯು ನಿರಂತರ ನಷ್ಟ ಅನುಭವಿಸಲಾರಂಭಿಸಿತು. ಕಂಪನಿಯ ಜಾಲವು ಸಂಪೂರ್ಣವಾಗಿ ನಶಿಸುವುದರೊಂದಿಗೆ, ಕಡೆಗೆ ಕಂಪನಿಯನ್ನು ಬಿ.ಐ.ಎಫ್.ಆರ್. ಮುಂದೆ ರೋಗಗ್ರಸ್ತ ಉದ್ಯಮವೆಂದು 1996ರ ಡಿಸೆಂಬರ್ ನಲ್ಲಿ ನೋಂದಾಯಿಸಲಾಯಿತು.

ಬಿ.ಐ.ಎಫ್.ಆರ್ ನಿರ್ದೇಶನದಂತೆ ಕಂಪನಿಯನ್ನು ಖಾಸಗೀಕರಿಸಲು ಸರ್ಕಾರವು ಆದೇಶಿಸಿತು. ಆದರೆ, ಖಾಸಗೀಕರಣಕ್ಕಾಗಿ ಸೂಕ್ತ ಪ್ರಸ್ತಾವನೆಗಳು ಬಾರದ ಕಾರಣ ಬಿ.ಐ.ಎಫ್.ಆರ್, ತನ್ನ 18.07.2000ರ ಆದೇಶದಲ್ಲಿ ಕಂಪನಿಯನ್ನು ಮುಚ್ಚಲು ಸರ್ಕಾರಕ್ಕೆ ಆದೇಶಿಸಿತಲ್ಲದೇ ಕಂಪನಿಯ ಪರಿಸಮಾಪ್ತಿಗಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡಿತು. ಬಿ.ಐ.ಎಫ್.ಆರ್.ನ ಆದೇಶವನ್ನು ಪ್ರಶ್ನಿಸಿ ಕಂಪನಿಯು ಎ.ಎ.ಐ.ಎಫ್.ಆರ್.ಗೆ ಮನವಿ ಸಲ್ಲಿಸಿತು. ಎ.ಎ.ಐ.ಎಫ್.ಆರ್., ತನ್ನ 18.07.2001ರ ತೀರ್ಪಿನಲ್ಲಿ ಬಿ.ಐ.ಎಫ್.ಆರ್.ನ ಆದೇಶವನ್ನು ಎತ್ತಿ ಹಿಡಿಯಿತಲ್ಲದೇ, ಕಂಪನಿಯನ್ನು ಮುಚ್ಚಲು ಶಿಫಾರಸ್ಸು ಮಾಡಿತ್ತು. ಅಂತೆಯೇ, ಪರಿಶೀಲನೆಯ ನಂತರ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಿಐ 25 ಸಿಇಎಲ್ 97 (ಪಿ-4), ದಿನಾಂಕ: 4.01.2002ರ ಮುಖೇನ ಕಂಪನಿಯ ಕಾರ್ಯಾಚರಣೆಗಳನ್ನು ಪರಿಸಮಾಪ್ತಿಗೊಳಿಸುವಂತೆ ಕಂಪನಿಗೆ ಆದೇಶಿಸಿತು. ಈ ಸಂಬಂಧದ ಲಿಕ್ವಿಡೇಟರ್‌ನ ನೇಮಕಾತಿಯ ವಿಷಯವು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇದೆ.

ಕಂಪನಿಯು ಸುಮಾರು 90 ಕೋಟಿ ರೂ.ಗಳ ಸಂಚಿತ ನಷ್ಟ ಹಾಗೂ 122 ಕೋಟಿ ರೂ.ಗಳ ಹಣಕಾಸಿನ ಬಾಕಿ ಉಳಿದಿರುತ್ತದೆ. ಕಂಪನಿಯ 1560 ಮಂದಿ ಉದ್ಯೋಗಿಗಳ ಪೈಕಿ 1014 ಮಂದಿ ಸ್ವಯಂ ನಿವೃತ್ತಿ ಪಡೆದು ಬಿಡುಗಡೆ ಹೊಂದಿರುತ್ತಾರೆ. ಈ ಬಾಬ್ತಿಗೆ ಕರ್ನಾಟಕ ಸರ್ಕಾರವು 47.00 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು, ಸದರಿ ಮೊತ್ತದಲ್ಲಿ 40.00